ಒಮ್ಮೆ ಈ ಮುದುಕ ಆಸ್ಪತ್ರೆಯಲ್ಲೆ ಅಸುನೀಗಿದರೆ ಅನುಕಂಪದ ಅಲೆಯ ಮೂಲಕ ತಾನು ಗೆಲ್ಲಬಹುದು. ಎಷ್ಟಾದರೂ ಆ ಮುದುಕನ ದತ್ತುಪುತ್ರನಲ್ಲವೆ? ಕೊಳೆಗೇರಿ ಜನಗಳ ಪುನರ್ವಸತಿ ಪ್ರಾಧಿಕಾರದ ಚುಕ್ಕಾಣಿ ಹಿಡಿದರೆ ತನ್ನನ್ನು ಕೇಳುವವರಾರು? – ಸುಭಾಷ್ ವಾಘ್ಮೊರೆ ಕನಸು ಕಾಣುತ್ತಿದ್ದ.

ಹೀಗೆ ಅಪ್ಪುರಾಯ ಕಾಮತ್ ಬೆಹರಾಮ್‌ಜೀಯವರ ಪ್ರಭಾವಕ್ಕೆ ಒಳಪಟ್ಟು ಅವರ ಶಿಸ್ತುಬದ್ಧ ಜೀವನ, ಪರರ ಬಗ್ಗೆ ದಯೆ, ಕೆಳಸ್ತರದಲ್ಲಿರುವವರ ಮೇಲೆ ಅನುಕಂಪ, ತಾನು ತನ್ನದು ಎನ್ನದ ನಿರ್ಮೋಹಿತನ, ಪ್ರಕೃತಿಯ ಮೇಲಿನ ನಿರ್ವ್ಯಾಜ ಪ್ರೇಮ ಇತ್ಯಾದಿಗಳನ್ನು ತನಗರಿವಿಲ್ಲದಂತೆಯೇ ಮೈಗೂಡಿಸಿಕೊಂಡ.

ಬೆಹರಾಮ್‌ಜೀಯವರಿಗೆ ಮೊದಲಿನಿಂದಲೂ ಕನ್ನಡಿಗರ ಮೇಲಿನ ಅಚ್ಚೆ ಒಂದು ತೂಕ ಜಾಸ್ತಿ ಎನ್ನಬೇಕು. ಅವರ ಪ್ರಾಮಾಣಿಕತೆ, ಸತ್ಯನಿಷ್ಠುರತೆ, ಶ್ರಮದಾಯಕ ದುಡಿಮೆ – ಇವನ್ನೆಲ್ಲ ಅವರು ಮೆಚ್ಚಿಕೊಂಡಿದ್ದರೂ ತನ್ನ ಸ್ವಂತ ಮಗನಂತೆ ಪಾಲಿಸಿದ ಈ ಅಪ್ಪುರಾಯನಂತೂ ಅವರ ಮನವನ್ನು ಪೂರ್ತಿ ಗೆದ್ದುಬಿಟ್ಟಿದ್ದ.

ಬೆಹರಾಮ್‌ಜೀಯವರು ನಿಧನರಾಗಿ ಅವರ ಪಾರ್ಥಿವ ಶರೀರ 'ಟವರ್ ಆಫ್ ಸೈಲನ್ಸ್' (ಪಾರ್ಸಿಗಳ ಮೃತದೇಹ ರಣಹದ್ದುಗಳ ಪಾಲಾಗುವ ಸ್ಥಳ) ಪ್ರವೇಶಿಸಿದ ಒಂದು ವಾರದಲ್ಲಿ ದಿಕ್ಕು ತೋಚದಂತೆ ಕುಳಿತಿದ್ದ ಅಪ್ಪುರಾಯ ತಬ್ಬಿಬ್ಬುಗೊಳ್ಳುವಂತೆ ಬೆಹರಾಮ್‌ಜೀಯವರ ಸ್ನೇಹಿತ ಅಡ್ವೋಕೇಟ್ ಪಾಂಡುರಂಗ ಮೋರೆ ಮಾಡಿಬಿಟ್ಟರು. ಆತ ಅಂದು ಬೆಹರಾಮ್‌ಜೀಯವರ ವೀಲುನಾಮೆಯನ್ನು ಬಹಿರಂಗಗೊಳಿಸಿದ. ಸಂಕ್ಷಿಪ್ತವಾಗಿ ಅದರಲ್ಲಿದ್ದ ವಿಷಯವಿಷ್ಟು: ನನ್ನ ಸಕಲ ಚರಾಚರ ಆಸ್ತಿಗಳ ಕೇವಲ ಹತ್ತರಲ್ಲಿ ಒಂದು ಪಾಲು ಹೊರತುಪಡಿಸಿ ಸಮಸ್ತ ಸಂಪತ್ತು ಅಪ್ಪುರಾಯ ಕಾಮತನಿಗೆ ಸೇರುತ್ತದೆ. ಹತ್ತರಲ್ಲಿ ಸ್ಪಷ್ಟವಾಗಿ ನಮೂದಿಸಿದ ಒಂದು ಪಾಲು ಮಾತ್ರ ಬಡ ಪಾರ್ಸಿ ಸಮುದಾಯದ ಜನಗಳ ಸಹಾಯಕ್ಕಾಗಿ ಪಾರ್ಸಿ ಪಂಚಾಯತ್‌ಗೆ ಸೇರುತ್ತದೆ. ಈ ವೀಲುನಾಮೆಯನ್ನು ಸ್ವಂತ ಇಚ್ಛೆಯಿಂದ, ಅನ್ಯರ ಪ್ರೇರಣೆ ಒತ್ತಾಯವಿಲ್ಲದೆ ನನ್ನ ಮನಃಸಾಕ್ಷಿಯ ಪ್ರಕಾರ, ಈರ್ವರು ಸಾಕ್ಷಿಗಳ ಸಮಕ್ಷಮ ತಯಾರಿಸಲಾಗಿದ್ದು, ಎಡ್ವೋಕೇಟ್ ಮೋರೆಯವರ ಮೂಲಕ ರಿಜಿಸ್ಟರ್ ಮಾಡಿಸಲಾಗಿದೆ. ರಿಜಿಸ್ಟರ್ ಮಾಡಲ್ಪಟ್ಟ ವೀಲುನಾಮೆಯ ಒಂದು ಪ್ರತಿಯನ್ನು ಚಾರಿಟಿ ಕಮಿಶನರ್‌ಗೆ ಕಳುಹಿಸಲಾಗಿದ್ದು, ಪಾರ್ಸಿ ಪಂಚಾಯತ್ ಅವರ ನಿರ್ದೇಶನವನ್ನು ಪಾಲಿಸಬೇಕಾಗುತ್ತದೆ. ನನಗೆ ಸೇರಿದ ಆಸ್ತಿಪಾಸ್ತಿಗಳು ಹಾಗೂ ಬ್ಯಾಂಕಿನಲ್ಲಿರುವ ಹಣಕಾಸುಗಳ ವಿವರಗಳನ್ನು ನಿಷ್ಪ್ರಷ್ಟವಾಗಿ ನಮೂದಿಸಲಾಗಿದೆ. ನನಗಾಗಲಿ, ನನ್ನ ತಂದೆಯವರಿಗಾಗಲಿ, ಸಹೋದರ, ಸಹೋದರಿಯರಾಗಲಿ, ಇತರ ನಿಕಟಬಂಧುಗಳಾಗಲಿ ಇಲ್ಲದಿರುವುದರಿಂದ ಈ ವೀಲುನಾಮೆಯನ್ನು ಯಾರೂ ಪ್ರಶ್ನಿಸುವಂತಿಲ್ಲ. ಜೈರಾಮ್‌ಜೀ ಅರ್ದೇಶಿರ್ ಮಿಸ್ತ್ರಿ (ರುಜು).

"ಅಂಕಲ್, ನನಗೆ ಇವೆಲ್ಲ ಬೇಡ, ನಾನು ಮುಂಬಯಿ ಸೇರಿದ್ದು ಅನಾಥನಾಗಿ, ಬಾಬಾ (ಬೆಹರಾಮ್‌ಜೀ) ಅವರ ಕೃಪೆಯಿಂದ ಹೀಗೆ ಬೆಳೆದು ನಿಂತಿದ್ದೇನೆ. ನಾನು ನನ್ನ ಊರಿಗೆ ಮರಳಿ